# ಸರ್ವಜನಕ್ಕೂ ಸಂಗೀತ

ಡಿಸೆಂಬರ್ ತಿಂಗಳೆಂದರೆ ತಮಿಳುನಾಡಿನ ರಾಜಧಾನಿ ಚೆನ್ನೈ ನಗರ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಗಳ ಹಬ್ಬಕ್ಕೆ ಸಜ್ಜಾಗುತ್ತದೆ. ದಕ್ಷಿಣಾದಿ ಅಥವಾ ಕರ್ನಾಟಕ ಸಂಗೀತದ ವಾಗ್ಗೇಯಕಾರರು, ಸ್ವರವಾದಕರು, ಗಾಯಕರು, ಶ್ರೋತೃಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ. ವಿಶ್ವದಲ್ಲಿಯೆ ಅತಿ ದೊಡ್ಡ ಹಾಗೂ ದೀರ್ಘಕಾಲ ನಡೆಯುವ ಕಲಾಹಬ್ಬ ಎನಿಸಿಕೊಂಡಿರುವ ಇದು 85 ವರ್ಷಗಳಷ್ಟು ಹಳೆಯದು. ಈ ಬಾರಿ ಸುಮಾರು 90 'ಸಭಾ'ಗಳಿಗೆ ಸೇರಿದ 210 ಸಂಗೀತ ವಿದುಷಿಯರು 75 ರಂಗಸ್ಥಳಗಳಲ್ಲಿ 3200 ಪ್ರದರ್ಶನಗಳನ್ನು ನೀಡುತ್ತಿದಾರೆ. ಇದು ಬ್ರಾಹ್ಮಣರಿಂದ ಬ್ರಾಹ್ಮಣರಿಗಾಗಿ ಬ್ರಾಹ್ಮಣರೇ ನಡೆಸಿಕೊಡುವ ಹಬ್ಬವೆಂದರೆ ತಪ್ಪಾಗಲಾರದು. ಕಾರಣ, ಸಂಘಟಕರಿಂದ ಹಿಡಿದು ಶ್ರೋತೃಗಳವರೆಗೆ ಎಲ್ಲರೂ ಬ್ರಾಹ್ಮಣರೇ ಆಗಿರುತ್ತಾರೆ. ಇದು ಯಾರನ್ನೂ ದೂಷಿಸುವ ಉದ್ದೇಶವಲ್ಲ. ಅದು ಬೆಳೆದು ಬಂದ ಐತಿಹಾಸಿಕ ವ್ಯವಸ್ಥೆಯೆ ಹಾಗಿದೆ. ಎಲ್ಲ ಕಲೆಗಳ ಮುಕುಟಪ್ರಾಯವಾಗಿರುವ ಸಂಗೀತ ಚೆನ್ನೈ ನಗರದಲ್ಲಿ ಶೇ.4 ಕ್ಕಿಂತಲೂ ಕಡಿಮೆ ಇರುವ ಅಲ್ಪಸಂಖ್ಯಾತ ಸಮೂಹದೊಳಗೆ ಉಳಿದುಹೋಗಿದೆ ಎಂಬುದೇ ವಿಶೇಷ. ಖ್ಯಾತ ಯುವ ಕರ್ನಾಟಕ ಸಂಗೀತ ವಿದ್ವಾನ್, ಚೆನ್ನೈ ಮೂಲದ ಟಿ.ಎಂ.ಕೃಷ್ಣ ಹೇಳುವ ಮಾತು ಮನನೀಯವಾಗಿದೆ. 'ಗತವನ್ನು ಚರ್ಚಿಸಿ ಪ್ರಯೋಜನವಿಲ್ಲ. ಈ ಕಲಾಪ್ರಕಾರವು ಕಳೆದ ಶತಮಾನದಲ್ಲಿ ಹೊಸ ಪರಿವೇಷದಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದರೂ ಸೌಂದರ್ಯೋಪಾಸನೆಯ ದೃಷ್ಟಿಯಲ್ಲಿ ಸೋಲನನುಭವಿಸಿದೆ. ಯಾಕೆಂದರೆ ಸಮಾಜದ ಇತರ ವರ್ಗಗಳ ಕೊಡುಗೆಯಿಂದ ಇದು ವಂಚಿತವಾಗಿದೆ'. ಮುಂದುವರೆದು; ಇಲ್ಲಿ ವರ್ಣವ್ಯವಸ್ಥೆಯಂಥ (Apartheid) ಗೋಡೆಗಳಿಲ್ಲ ಆದರೂ ಅವ್ಯಕ್ತವಾದ ಸಾಮಾಜಿಕ ಬೇಲಿಯಿದೆ ಎಂದು ಒಪ್ಪಿಕೊಳ್ಳುತ್ತಾರೆ. (ಅವರದೇ ಪುಸ್ತಕ 'ಎ ಸದರ್ನ್ ಮ್ಯೂಸಿಕ್: ಕರ್ನಾಟಿಕ್ ಸ್ಟೋರಿ').

ಶಾಸ್ತ್ರೀಯ ಸಂಗೀತವೆಂದರೆ ಅತಿ ಗಣ್ಯರ ಕ್ಷೇತ್ರವೆಂದೇ ಸಾಮಾನ್ಯ ತಿಳಿವಳಿಕೆ. ಬೌದ್ಧಿಕ ವಲಯವನ್ನು ಆಕ್ರಮಿಸಿರುವ ಬ್ರಾಹ್ಮಣ ವರ್ಗ ಸಹಜವಾಗಿಯೆ ಕರ್ನಾಟಕ ಸಂಗೀತದಲ್ಲೂ ಹೆಚ್ಚು ಪ್ರಭಾವಿಯಾಗಿದೆ. 20ನೇ ಶತಮಾನದ ಕೊನೆಯವರೆಗೂ ಇನ್ನೂ ಎರಡು ವರ್ಗಗಳು ಈ ಕ್ಷೇತ್ರದಲ್ಲಿ ಕಾರ್ಯಶೀಲವಾಗಿದ್ದವು. ಅವು ದೇವದಾಸಿಯರು ಮತ್ತು ನಾಗಸ್ವರವಾದಕರು. ಈ ಎರಡು ವರ್ಗಗಳಿಗೂ ಹಿಂದೂ ದೇವಾಲಯಗಳು ಆಶ್ರಯ ನೀಡುತ್ತಿದ್ದವು. ಆಗ ಸಂಗೀತವನ್ನು ಕೇವಲ ರಾಜಾಸ್ಥಾನಗಳು ಮತ್ತು ದೇವಸ್ಥಾನಗಳು ಪೋಷಿಸುತ್ತಿದ್ದವು. ಸ್ವಾತಂತ್ರ್ಯಾನಂತರ ರಾಜಾಸ್ಥಾನಗಳು ತಮ್ಮ ಅಸ್ತಿತ್ವ ಕಳೆದುಕೊಂಡವು ಮತ್ತು ದೇವದಾಸಿ ಪದ್ಧತಿ ವ್ಯಭಿಚಾರದ ಕಾರಣದಿಂದ ಸಾಮಾಜಿಕ ಅನಿಷ್ಠವೆಂದು ಬಹಿಷ್ಕಾರಕ್ಕೊಳಗಾಯಿತು. 1947ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯು ದೇವದಾಸಿ ಪದ್ಧತಿಯನ್ನು ಅಧಿಕೃತವಾಗಿ ರದ್ದುಗೊಳಿಸಿತು.

ಕೆಲ ಕಾಲಾನಂತರ ಮದ್ರಾಸಿನಲ್ಲಿ ಅಲ್ಲಿನ ಬ್ರಾಹ್ಮಣ ವರ್ಗ ನಶಿಸುತ್ತಿದ್ದ ಕರ್ನಾಟಕ ಸಂಗೀತವನ್ನು ರಾಜಾಶ್ರಯ ಮತ್ತು ದೇವಸ್ಥಾನಗಳಿಂದ ಹೊರತಂದು ನಗರ ಕೇಂದ್ರದ ಸಾರ್ವಜನಿಕ ಸಭಾಂಗಣಗಳಲ್ಲಿ ಪುನರ್‌ಪ್ರಸ್ಥಾಪಿಸಿತು. 'ಕಛೇರಿ'ಯ ಪರಿಕಲ್ಪನೆ ಹೀಗೆ ಪ್ರಾರಂಭವಾಯಿತು. ಇಂದಿಗೂ ಬ್ರಾಹ್ಮಣರು ಕರ್ನಾಟಕ ಸಂಗೀತಕ್ಕೆ ದೇವದಾಸಿಯರು ಮತ್ತು ನಾಗಸ್ವರವಾದಕರ ಕೊಡುಗೆಯನ್ನು ನೆನಸುತ್ತಾರಾದರೂ ಕಛೇರಿಗಳಿಗೆ ದೇವದಾಸಿಯರು (ಒಂದಿಬ್ಬರನ್ನು ಹೊರತುಪಡಿಸಿ) ಮತ್ತು ನಾಗಸ್ವರವಾದಕರನ್ನು ಹೊರಗಿಟ್ಟಿರುವುದು ಸ್ಪಷ್ಟವಾಗಿಯೆ ಇದೆ.

ಭಾರತ ಈಗ ತ್ವರಿತ ಆರ್ಥಿಕ ಬೆಳವಣಿಗೆಯನ್ನು ಕಾಣುತ್ತಿದೆ. ಆಧುನಿಕತೆಗೆ ತೆರೆದುಕೊಳ್ಳುತ್ತಿದೆ. ಆದರೆ ಸಮಾಜದ ಸರ್ವತೋಮುಖ ಬದಲಾವಣೆ ಸ್ಪಷ್ಟವಾಗಿ ಕಾಣಿಸಿಕೊಳ್ಳುವುದಿಲ್ಲ. ಒಳಗೊಳ್ಳದಿರುವಿಕೆಯ ಕಾರಣದಿಂದ ಅವುಗಳ ಲಾಭ ಹೆಚ್ಚಾಗಿ ಮೇಲ್ವರ್ಗದವರಿಗೇ ಸಲ್ಲುತ್ತಿದೆ. ಜಾತಿ ಪದ್ಧತಿ ಸಂಸ್ಕೃತಿಯ ಮೇಲೂ ಹೇಗೆ ಪರಿಣಾಮ ಬೀರಿದೆ ಎಂಬುದಕ್ಕೆ ಕಲಾಪ್ರಕಾರಗಳು ಸಹ ಜಾತಿನಿಷ್ಠವಾಗಿರುವುದೇ ಸಾಕ್ಷಿ. ಅಲ್ಲಿಯೂ ಶಿಷ್ಟ ಮತ್ತು ಜನಪದ ಕಲೆಗಳೆಂದು ವಿಭಜಿತಗೊಂಡಿವೆ. ಸರ್ಕಾರದಿಂದ ಪ್ರೋತ್ಸಾಹ ಪಡೆಯುವ ಜನಪದ ಕಲೆಗಳನ್ನು ಕೆಳಜಾತಿ ಜನಗಳೇ ಆಯ್ದುಕೊಳ್ಳುವುದೇಕೆ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಅಲ್ಲಲ್ಲಿ ಪರಿಶಿಷ್ಟರೂ ಶಾಸ್ತ್ರೀಯ ನೃತ್ಯ ಮತ್ತು ಸಂಗೀತಗಳನ್ನು ಕಲಿತು 'ಅರಂಗೇಟ್ರಂ' ನಡೆಸಿದ ಉದಾಹರಣೆಗಳು ಸಿಗುತ್ತವೆಯಾದರೂ ವೃತ್ತಿಪರರಾಗಿ ಖ್ಯಾತರಾದದ್ದು ಇಲ್ಲವೆನ್ನುವಷ್ಟು ಕಡಿಮೆ. ಈ ಸಮಾಜದಲ್ಲಿ ಅಗೋಚರವಾದ ಜಾತಿಗಡಿರೇಖೆಗಳು ಗಟ್ಟಿಯಾಗಿ ಬೇರುಬಿಟ್ಟಿವೆ. ಬದಲಾವಣೆಯನ್ನು ಹತ್ತಿಕ್ಕುವುದರಲ್ಲಿ ಯಶಸ್ವಿಯಾಗಿವೆ.

ಈ ಅಸಮತೋಲವನ್ನು ಸರಿಪಡಿಸಲೋ ಎಂಬಂತೆ ಟಿ. ಎಂ. ಕೃಷ್ಣ ಈ ಬಾರಿ ಚೆನ್ನೈ ಸಮೀಪದ ಬೆಸ್ತರ ಹಳ್ಳಿಯೊಂದರಲ್ಲಿ ಎರಡು ದಿನಗಳ ಸಂಗೀತ ಗೋಷ್ಠಿಯನ್ನು ಖಾಸಗೀ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದಾರೆ. ಜಾತಿ ಶ್ರೇಣಿಯಲ್ಲಿ ಕೊನೆಯಲ್ಲಿರುವ ಪಳ್ಳಿನವರ್ ಸಮಾಜದ ಕಲಾವಿದರು 'ಪರಿಯಟ್ಟಂ' ಎಂಬ ನಾಟ್ಯಸಂಗೀತವನ್ನು ಪ್ರಸ್ತುತ ಪಡಿಸಲಿದ್ದಾರೆ. ಉದಾರ ಮನಸ್ಸಿನ ಕೃಷ್ಣ ಅಂಥವರ ಪ್ರಯತ್ನದಿಂದ ಕಲೆಯ ಬೆಳವಣಿಗೆಯೂ ಸಮಾಜದ ಬೆಳವಣಿಗೆಯೂ ಸರ್ವತೋಮುಖವಾಗಿ ಆಗಲೆಂದು ಆಶಿಸೋಣ.

■ ಮೂಚಿ

## ಮಾತೇ ಮುತ್ತು

★ ಧರ್ಮದ ರಹಸ್ಯ ಇರುವುದು ಸಿದ್ಧಾಂತಗಳಲ್ಲಿ ಅಲ್ಲ, ಅದರ ಅನುಷ್ಠಾನದಲ್ಲಿ. ಒಳ್ಳೆಯವರಾಗಿರುವುದು, ಒಳ್ಳೆಯದನ್ನು ಮಾಡುವುದು– ಇದೇ ಧರ್ಮದ ಸರ್ವಸ್ವ.

–ಸ್ವಾಮಿ ವಿವೇಕಾನಂದ

★ ನೀವು ಯಾವತ್ತಾದರೂ ಬಹುಸಂಖ್ಯಾತರ ಜತೆಗೆ ನಿಮ್ಮನ್ನು ಗುರುತಿಸಿಕೊಂಡರೆ, ಅದು ವಿಶ್ರಾಂತಿ ಪಡೆದು ಭಿನ್ನವಾಗಿ ಯೋಚಿಸಲು ಸಕಾಲ.

–ಮಾರ್ಕ್ ಟ್ವೈನ್

★ ಶ್ರೇಷ್ಠ ಕನಸುಗಾರರ ಶ್ರೇಷ್ಠ ಕನಸುಗಳು ಯಾವತ್ತೂ ನನಸಾಗುತ್ತವೆ.

–ಎ.ಪಿ.ಜೆ.ಕಲಾಮ್

★ ಜ್ಞಾನ ಇಲ್ಲದಿರುವುದು ಅಂತಹ ನಾಚಿಕೆಯ ಸಂಗತಿಯೇನೂ ಅಲ್ಲ. ಆದರೆ ಕಲಿಯಲು ಮನಸ್ಸು ಮಾಡದಿರುವುದು ನಾಚಿಕೆಯ ಸಂಗತಿ.

–ಬೆಂಜಮಿನ್ ಫ್ರಾಂಕ್ಲಿನ್

★ ಯಾವುದೇ ಕೆಲಸವನ್ನು ಆರಂಭಿಸುವ ಮುನ್ನ, ಈ ಕೆಲಸವನ್ನು ಏಕೆ ಮಾಡುತ್ತಿದ್ದೇನೆ, ಫಲಿತಾಂಶ ಏನಾಗಬಹುದು ಮತ್ತು ಇದರಲ್ಲಿ ಯಶಸ್ವಿ ಆಗಬಲ್ಲನೆ ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಿ. ಪ್ರಶ್ನೆಗಳಿಗೆ ಉತ್ತರ ಸಿಕ್ಕಿದ ಬಳಿಕವಷ್ಟೇ ಕೆಲಸ ಸುರು ಮಾಡಿ.

–ಚಾಣಕ್ಯ

★ ಶ್ರೇಷ್ಠ ಮನಸ್ಸುಗಳು ಆಲೋಚನೆಗಳ ಬಗ್ಗೆ ಚರ್ಚಿಸುತ್ತವೆ, ಸಾಧಾರಣ ಮನಸ್ಸುಗಳು ಘಟನೆಗಳ ಬಗ್ಗೆ ಚರ್ಚಿಸುತ್ತವೆ. ಸಣ್ಣ ಮನಸ್ಸುಗಳು ಜನರ ಬಗ್ಗೆ ಚರ್ಚಿಸುತ್ತವೆ.

–ಎಲೀನರ್ ರೂಸ್‌ವೆಲ್ಟ್

★ ನೀವು ನಿಮ್ಮ ಕನಸುಗಳನ್ನು ನಿರ್ಮಿಸಿಕೊಳ್ಳದಿದ್ದಲ್ಲಿ, ಇತರರು ತಮ್ಮ ಕನಸುಗಳನ್ನು ಈಡೇರಿಸಲು ನಿಮ್ಮನ್ನು ಬಾಡಿಗೆಗೆ ಪಡೆಯುತ್ತಾರೆ.

–ಧೀರೂಭಾಯಿ ಅಂಬಾನಿ

★ ಇತರರು ತನ್ನತ್ತ ಎಸೆದ ಇಟ್ಟಿಗೆಗಳನ್ನೇ ಒಟ್ಟುಗೂಡಿಸಿ ಗಟ್ಟಿಯಾದ ಪಂಚಾಂಗವನ್ನು ನಿರ್ಮಿಸುವವನು ಅತ್ಯಂತ ಯಶಸ್ವೀ ಮನುಷ್ಯ.

–ಡೇವಿಡ್ ಬ್ರಿಂಕ್ಲೀ

★ ಒಬ್ಬ ಯಶಸ್ವೀ ಮನುಷ್ಯ ಮತ್ತು ಇತರರ ನಡುವಣ ವ್ಯತ್ಯಾಸ ಏನೆಂದರೆ, ಅದು ಶಕ್ತಿಯ ಕೊರತೆ ಅಥವಾ ಜ್ಞಾನದ ಕೊರತೆ ಅಲ್ಲ; ಇಚ್ಛಾಶಕ್ತಿಯ ಕೊರತೆ.

–ವಿನ್ಸ್ ಲೊಂಬಾರ್ಡಿ

★ ಮೊದಲು ಆಟದ ನಿಯಮಗಳನ್ನು ಸರಿಯಾಗಿ ಕಲಿತುಕೊಳ್ಳಿ. ಆಗ ನೀವು ಇತರರಿಗಿಂತ ಚೆನ್ನಾಗಿ ಆಡಬಹುದು.

–ಆಲ್ಬರ್ಟ್ ಐನ್‌ಸ್ಟೀನ್

★ ವೈಫಲ್ಯಗಳ ಮೂಲಕವೇ ಯಶಸ್ಸನ್ನು ಸಾಧಿಸಿ. ನಿರುತ್ಸಾಹಗೊಳಿಸುವಿಕೆ ಮತ್ತು ವೈಫಲ್ಯಗಳು ಯಶಸ್ಸಿನ ಅನಿವಾರ್ಯ ಮೆಟ್ಟಿಲುಗಳು.

–ಡೇಲ್ ಕಾರ್ನೆಜ್